ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 20-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಅಣ್ಣ ಒಂದನೇ ಪ್ರತಿವಾದಿಗೆ ಮೇ 21 2014 ರಲ್ಲಿ ಮದುವೆ ಆಗಿರುತ್ತಾರೆ ಎಂದರೆ ಸಾಕ್ಷಿ 2014 ರಲ್ಲಿ ಮದುವೆ ಆಗಿರುತ್ತಾರೆ . ಆದರೇ ದಿನಾಂಕ ನೆನಪಿಲ್ಲ . ನನ್ನ ಅಣ್ಣ ಒಂದನೇ ಪ್ರತಿವಾದಿ ಮದುವೆ ಆಗುವ ಸಮಯದಲ್ಲಿ ಅವರ ಹೆಂಡತಿ ಮಂಗಳೂರಿನ ಎಜೆ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದರು ಎಂದರೆ ಸರಿ . ನನ್ನ ಅಣ್ಣ ಒಂದನೇ ಪ್ರತಿವಾದಿಯ ಹೆಂಡತಿ ಮತ್ತು ಹೆಂಡತಿಯ ತಾಯಿ ಒಟ್ಟಿಗೆ ಮಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ . ಮದುವೆ ಆಗುವಾಗ ನನ್ನ ಅಣ್ಣ ಒಂದನೇ ಪ್ರತಿವಾದಿಯ ಹೆಂಡತಿಯ ತಂದೆ ಇರಲಿಲ್ಲ ಎಂದರೆ ಸರಿ . ನನ್ನ ಅಣ್ಣ ಒಂದನೇ ಪ್ರತಿವಾದಿ ಮದುವೆ ಆಗುವ ಒಂದು ವಾರ ಮೊದಲು ಐಟಂ ನಂ 3 ರ ಸ್ವತ್ತನ್ನು ಅಂದರೆ ಮಂಗಳೂರಿನಲಿ ಇರುವ flat ನ್ನು ಖರೀದಿಸಿದ್ದರು ಎಂದರೆ ಸರಿ . ಸಾಕ್ಷಿ ಮುಂದುವರಿದು ನಮ್ಮ ಅತ್ತಿಗೆಗೆ ಮನೆ ಇತ್ತು ನಾವು ಹೋಗಿ ಬಂದು ಉಳಿಯಲು ನನ್ನ ಅಣ್ಣ ಒಂದು ಮನೆ ತೆಗೆದುಕೊಳ್ಳುವ ಎಂದು ಹೇಳಿದರು. ಆದ್ದರಿಂದ ಕುಟುಂಬದ ಹಣದಿಂದ ಮಂಗಳೂರಿನಲ್ಲಿ ಐಟಂ ನಂ 3 ರ ಸ್ವತ್ತನ್ನು ಖರೀದಿಸಲಾಯಿತು . ಐಟಂ ನಂ 3 ರ ಸ್ವತ್ತನ್ನು ಖರೀದಿಸಿದ ಕ್ರಯಪತ್ರವನ್ನು ಒಪ್ಪುತ್ತೇನೆ ಆದರೇ ಅದರಲ್ಲಿ ಕಾಣಿಸಿರುವ ಮೊತ್ತವನ್ನು ನಾನು ಒಪ್ಪುವುದಿಲ್ಲ. ಅದರಲ್ಲಿ ರೂ 37,75,000/- ಎಂದು ಕಾಣಿಸಲಾಗಿದೆ. ಆದರೇ ಒಟ್ಟು ನಾವು ರೂ 75,00,000 ಖರೀದಿಸಿದ್ದೇವೆ. ಆ್ಯಕ್ಸಿಸ್ ಬ್ಯಾಂಕ್ ಚೆಕ್ ಮುಖೇನ ಮರಾಟಗಾರರಿಗೆ ಹಣ ಪಾವತಿಯಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮನೆಯ ದುಡ್ಡಿನಿಂದ 4 ಜನರ ಪರವಾಗಿ ಖಾತೆಗೆ ಜಮೆ ಆಗಿತ್ತು ಎಂದು ತಿಳಿಸಿರುತ್ತಾರೆ . ಆ ಸಮಯದಲ್ಲಿ ಆ್ಯಕ್ಸಿಸ್ ಬ್ಯಾಂಕ್ ನಲ್ಲಿ ಒಂದನೇ

ಪ್ರತಿವಾದಿಯ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನೆನಪಿಲ್ಲ. ಸಾಕ್ಷಿ ಮುಂದುವರಿದು ಎಲ್ಲಾ ಲೆಕ್ಕಚಾರಗಳನ್ನು ಅವರೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಎಲ್ಲಿಂದ ಹೇಗೆ 4 ಜನರಿಂದ ಆ ಖಾತೆಗೆ ಜಮೆ ಆಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಲಿಲ್ಲ ಎಂದು ತಿಳಿಸಿ, ಮುಂದುವರಿದು ನಮ್ಮ 4 ಜನರಿಗೆ ಯಾವುದೇ ಬೇರೆ ಉದ್ಯೋಗ ಇರಲಿಲ್ಲ ಮನೆಯಲ್ಲಿ ಕುಟುಂಬದ ಆಸ್ತಿಯ ಆದಾಯ ಬಿಟ್ಟರೇ ಬೇರೆ ಆದಾಯ ಇರಲಿಲ್ಲ ಎಂದು ತಿಳಿಸಿರುತಾರೆ. ಯಾವ ಕುಟುಂಬದ ಆಸ್ತಿಯ ಹಣ ಜಮೆ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳ ಹಣ ಜಮೆ ಇತ್ತು ಎಂದು ತಿಳಿಸಿರುತ್ತಾರೆ . 2014 ರಲ್ಲಿ ಖರೀದಿಸುವಾಗ ನಿಮ್ಮ ಕುಟುಂಬದ ಆಸ್ತಿಗಳು ಯಾವುದು ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 3 ಎಕ್ರೆ ಬೆಂಗಳೂರಿನಲ್ಲಿ ಇತ್ತು , ಒಂದು ಅಪಾರ್ಟ್ ಮೆಂಟ್ ಇತ್ತು, ಉಡುಪಿಯ ಇಂದ್ರಾಳಿಯಲ್ಲಿ 20 ಸೆಂಟ್ಸ್ ಖರೀದಿಸಿದ ಜಾಗ ಇತ್ತು, ಮಣಿಪಾಲದಲ್ಲಿ 40 ಸೆಂಟ್ಸ್ ಜಾಗ , 76 ಬಡಗುಬೆಟ್ಟುವಿನಲ್ಲಿ , ವಾಸುಕೀ ಟವರ್ ನ್ಯಾಯಲಯದ ರಸ್ತೆಯ ಹತ್ತಿರ ಜಾಗ ಇತ್ತು ಎಂದು ತಿಳಿಸಿರುತ್ತಾರೆ . ಈ ಎಲ್ಲಾ ಆಸ್ತಿಗಳು ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತಾ ಜಂಟೀ ಕುಟುಂಬದ ಹೆಸರಿನಲ್ಲಿ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  2 ರಿಂದ 3 ಆಸ್ತಿಗಳು ಜಂಟೀ ಕುಟುಂಬದ ಹೆಸರಿನಲ್ಲಿ ಇರಲಿಲ್ಲ ಎಂದು ತಿಳಿಸಿರುತ್ತಾರೆ . ಅದು ನನ್ನ ಅಣ್ಣ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ಐಟಂ ನಂ 3 ರ ಸ್ವತ್ತಿನಲ್ಲಿ ಒಂದನೇ ಪ್ರತಿವಾದಿ , ಆತನ ಹೆಂಡತಿ ಮತ್ತು ಹೆಂಡತಿಯ ತಾಯಿ ಬೆಂಗಳೂರಿಗೆ ಹೋಗುವವರೆಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಸ್ವದ್ರಿ ಮನೆಯಲ್ಲಿ ನನ್ನ ಅಣ್ಣ ಹೋಗಿ ಬರುತಿದ್ದರು. ನಾನು ಕೂಡ ಹೋಗಿ ಬರುತಿದ್ದೆ. ಒಂದು ಒಂದು ದಿನ ಮಾತ್ರ ಉಳಿದುಕೊಳ್ಳುತಿದ್ದೆವು ಎಂದು ತಿಳಿಸಿರುತಾರೆ. ಒಂದನೇ ಪ್ರತಿವಾದಿಯ ಹೆಂಡತಿ ಅವರ ಮಗುವಿನ ಜೊತೆ ಅಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ.   ಆ ಮನೆಗೆ ಒಂದು ತಿಂಗಳಿಗೆ ಎಷ್ಟು maintenance ಖರ್ಚು ಬರುತಿತ್ತು ಎಂದು

ನನಗೆ ನೆನಪಿಲ್ಲ. ಸದ್ರಿ ಮನೆಗೆ ನನ್ನ ಅಣ್ಣನೇ maintenance charges ಗಳನ್ನು ಮತ್ತು ವಿದ್ಯುತ್ ಚಕ್ತಿ ಶುಲ್ಕವನ್ನು ಪಾವತಿಸುತಿದ್ದರು ಎಂದರೆ ಸಾಕ್ಷಿ ನಮ್ಮ ಎಲ್ಲರ ಪರವಾಗಿ ಪಾವತಿಸುತಿದ್ದರು ಎಂದು ತಿಳಿಸಿರುತಾರೆ. ಸಾಕ್ಷಿಗೆ ಆ ಬಗ್ಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ಒಪ್ಪುವುದಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಅಪಾರ್ಟ್ ಮೆಂಟ್ ನ ಅಸೋಸಿಯೇಶನ್ ರವರು maintenance charges ಪಡೆದ ಬಗ್ಗೆ ರಸೀದಿಗಳನ್ನು ಕೊಟ್ಟಿದ್ದು ಅದನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದನ್ನು ತಾವು ಒಪ್ಪುವುದಿಲ್ಲ ಎಂದು ತಿಳಿಸಿರುತಾರೆ . ಅದರ ವಿದ್ಯುತ್ ಮೀಟರ್ ನ ಆರ್ ಆರ್ ನಂಬರ್ ನನಗೆ ನೆನಪಿಲ್ಲ . ಸದ್ರಿ ಅಪಾರ್ಟ್ಮೆಂಟ್ ಗೆ ಪಾರ್ಕಿಂಗ್ ಇತ್ತು ಅದರ ಸಂಖ್ಯೆ402 ಎಂದು ಇತ್ತು . ಸಾಕ್ಷಿಗೆ Electricity Bill ಕಟ್ಟಿದ ಬಗ್ಗೆ ದಾಖಲೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಕಟ್ಟಿರುತ್ತಾರೆ ಆದರೇ ಸದ್ರಿ ದಾಖಲೆಯನ್ನು ನಾನು ಒಪ್ಪುವುದಿಲ್ಲ ಎಂದು ತಿಳಿಸಿರುತಾರೆ. ಈ ಅಪಾರ್ಟ್ ಮೆಂಟ್ ಗೆ ಸಂಬಂದಪಟ್ಟಂತೆ ಖಾತೆ ಒಂದನೇ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ಸರಿ. ಸದ್ರಿ ಅಪಾರ್ಟ್ ಮೆಂಟ್ ನ flat ಗೆ ಸಂಬಂದಪಟ್ಟಂತೆ ಎಲ್ಲಾ ದಾಖಲೆಗಳು ಅಂದರೆ ಕಂದಾಯ ಪಾವತಿಸಿದ ರಸೀದಿಗಳು, ಖಾತೆ, maintenance charges, electricity bill ಎಲ್ಲವೂ ಕೂಡ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಕುಟುಂಬದ ಆಸ್ತಿ ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲಾ ದಾಖಲೆಗಳು ಒಂದನೇ ಪ್ರತಿವಾದಿ ಬಳಿ ಇದೆ ಎಂದು ತಿಳಿಸಿರುತ್ತಾರೆ. ನಿಮ್ಮ ಬಳಿ ಯಾವ ದಾಖಲೆ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ನೋಡಿ ಹೇಳಬೇಕು ಎಂದು ತಿಳಿಸಿರುತ್ತಾರೆ. flat ನ್ನು ರೂ 75 ಲಕ್ಷಕ್ಕೆ ಖರೀದಿಸಲಾಗಿದೆ ಎಂದು ನಾನು ಆದಾಯ ತೆರಿಗೆ ಇಲಾಖೆಗೆ ತಿಳಿಸಿಲ್ಲ . ಸದ್ರಿ flat ನ ದಾಖಲೆಗಳು ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದವು ಸರಿ ಅಲ್ಲ ಎಂದು ಯಾವುದಾದರೂ ಇಲಾಖೆಯಲ್ಲಿ

ಪ್ರಶ್ನಿಸಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಪಾಲು ಆಗುವಾಗ ಎಲ್ಲಾ ಸರಿ ಮಾಡೋಣ ಎಂದು ಹೇಳಿದ್ದರು ಎಂದು ತಿಳಿಸಿರುತ್ತಾರೆ. 2010 ರಿಂದ ಪಾಲು ಆಗುವಾಗ ಎಲ್ಲಾ ಸರಿ ಮಾಡೋಣ ಎಂದು ಹೇಳುತಿದ್ದರು.ಪಾಲು ಆಗುವಾಗ ಎಲ್ಲಾ ಸರಿ ಮಾಡೋಣ ಎಂದು ಹೇಳಿದ್ದರು ಎಂದು ವಾದಪತ್ರದಲ್ಲಿ ಕಾಣಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ವಕೀಲರಿಗೆ ಹೇಳಿದ್ದೇನೆ ಎಂದು ತಿಳಿಸಿರುತ್ತಾರೆ. ಕುಟುಂಬಕ್ಕಾಗಿ ಖರೀದಿಸಲಾಗಿದೆ ಎಂದು ನಾನು ನಮ್ಮ ವಕೀಲರ ಬಳಿ ಹೇಳಿರುತ್ತೇನೆ. ಕುಟುಂಬದ ಹಣದಿಂದ ಖರೀದಿಸಲಾಗಿದೆ ಎಂದು ಯಾವ ಆದಾರದಲ್ಲಿ ವಾದಪತ್ರದಲ್ಲಿ ಬರೆಯಿಸಿರುತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬೇರೆ ಆದಾಯ ಇರಲಿಲ್ಲ ಆದ್ದರಿಂದ ಆ ರೀತಿ ಬರೆಯಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ನನ್ನ ಖಾತೆಯಲ್ಲಿ , ನನ್ನ ತಮ್ಮನ ಖಾತೆಯಲ್ಲಿ ಮತ್ತು ನನ್ನ ತಾಯಿ ಖಾತೆಯಲ್ಲಿ ಹಾಗು ಒಂದನೇ ಪ್ರತಿವಾದಿಯ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು flat ನ್ನು ಖರೀದಿಸುವ ಸಮಯದಲ್ಲಿ ನೋಡಿಲ್ಲ. Flat ಖರೀದಿಸುವ ಸಮಯದಲ್ಲಿ ಹಣವನ್ನು ಹೇಗೆ ಹೊಂದಿಸಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬಾಡಿಗೆ ಬರುತಿತ್ತು, ಶೇರ್ ಗಳ ಆದಾಯ ಇತ್ತು ಎಂದು ತಿಳಿಸಿರುತ್ತಾರೆ. ಕ್ರಯಪತ್ರ ಆದ ವಿಚಾರ ನನಗೆ ಗೊತ್ತಿತ್ತು. ಹಣವನ್ನು ಹೇಗೆ ಹೊಂದಿಸಿದೀರಿ ಎಂದು ಪುನಃ ಕೇಳಿದ ಪ್ರಶ್ನೆಗೆ ಸಾಕ್ಷಿ ಬೆಂಗಳೂರಿನ ಲ್ಲಿ flat ಮಾರಿದ ಹಣ ಮತ್ತು ಮನೆಯಲ್ಲಿ ಕುಟುಂಬದ ಹಣ ಇತ್ತು, ಬಾಡಿಗೆ ಬರುತಿತ್ತು ಎಂದು ತಿಳಿಸಿರುತ್ತಾರೆ. ಮನೆಯಲ್ಲಿ flat ಖರೀದಿಸುವ ಸಮಯದಲ್ಲಿ ಎಷ್ಟು ಹಣ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಲು ಹೋಗಲಿಲ್ಲ ಅವರ ಮೇಲೆ ನಂಬಿಕೆ ಇತ್ತು ಎಂದು ತಿಳಿಸಿರುತ್ತಾರೆ. flat ನ್ನು 2012, 2013 ಮತ್ತು 2014 ರಂದು ಮಾರಾಟ ಮಾಡಲಾಗಿದೆ . flat ನ ಹಣ ಯಾರ ಖಾತೆಯಲ್ಲಿ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಲು ಹೋಗಲಿಲ್ಲ ಎಂದು ತಿಳಿಸಿರುತ್ತಾರೆ . ಐಟಂ ನಂ 3 ರ flat ಸಂಪೂರ್ಣವಾಗಿ ಒಂದನೇ ಪ್ರತಿವಾದಿಯ ಸ್ವಾಧೀನದಲ್ಲಿ ಇತ್ತು ಎಂದರೆ ಸಾಕ್ಷಿ ಅವರ ಜೊತೆ ನಾವು ಇದ್ದೆವು ಎಂದು

ತಿಳಿಸಿರುತಾರೆ . ಎಲ್ಲಾ ಸ್ವತಿಗಳಿಗೆ ಸಂಬಂದಪಟ್ಟಂತೆ EC ನ್ನು ನೋಡಿಲ್ಲ. ಐಟಂ ನಂ 3 ರ flat ಒಂದನೇ ಪ್ರತಿವಾದಿಯ ಪೂರ್ಣ ಸ್ವಾಮ್ಯ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದಾಖಲೆಗಳು ಮಾತ್ರ ಅವರ ಹೆಸರಿನಲ್ಲಿ ಇತ್ತು ಎಂದು ತಿಳಿಸಿರುತ್ತಾರೆ . ಸದ್ರಿ ದಾಖಲೆಗಳ ಪ್ರಕಾರ ಸದ್ರಿ ಸ್ವತ್ತನ್ನು ಇಚ್ಛಾನುಸಾರ ವಿಲೆ ಮಾಡುವ ಹಕ್ಕು ಒಂದನೇ ಪ್ರತಿವಾದಿಗೆ ಇತ್ತು ಎಂದರೆ ಸಾಕ್ಷಿ ನೋಡಿಲ್ಲ ಎಂದು ತಿಳಿಸಿರುತ್ತಾರೆ. ಕುಟುಂಬದ ಹಣದಲ್ಲಿ ಖರೀದಿಸಲಾಗಿದೆ ಎಂದು ನಿಮ್ಮ ಹೇಳಿಕೆಯ ಆದಾರದಲ್ಲಿ ಪಾಲು ಆಗುಬೇಕು ಎಂದು ಹೇಳುತಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕುಟುಂಬದ ಹಣದಿಂದಲೇ ಖರೀದಿಸಿದ್ದು, ಆದ್ದರಿಂದ ಕೇಳುತಿದ್ದೇನೆ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಒಂದು settlement deed ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದನ್ನು ಒಪ್ಪವುದಿಲ್ಲ ಎಂದು ತಿಳಿಸಿರುತಾರೆ . ಐಟಂ ನಂ 3 ರ ಸ್ವತ್ತನ್ನು ಒಂದನೇ ಪ್ರತಿವಾದಿ ಆತನ ಹೆಂಡತಿಗೆ settlement deed ಮಾಡಿ 2016 ರಲ್ಲಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಾಗಿದ್ದು 2020 ರಲ್ಲಿ ದಾವೆ ಹಾಕಿದ ನಂತರ ಅವರ ಪ್ರತಿವಾದ ಪತ್ರವನ್ನ ನೋಡಿ ಗೊತ್ತಾಯಿತು ಎಂದು ತಿಳಿಸಿರುತ್ತಾರೆ. settlement deed ನ್ನು ರದ್ದು ಮಾಡಬೇಕು ಎಂದು ಕೇಳಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಪಾಲು ಕೇಳಿದ್ದೇನೆ ಎಂದು ತಿಳಿಸಿರುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಸೇರಿ ದಾವಾಸ್ವತ್ತಿನ 1 ರಿಂದ 3 ಐಟಂಗಳನ್ನು ಆಕ್ಸಿಸ್ ಬ್ಯಾಂಕ್ ಗೆ ಅಡಮಾಣ ಮಾಡಿ ರೂ 77 ಲಕ್ಷ ಸಾಲ ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ . ಕೇಸು ಹಾಕುವವರೆಗೆ ಅಂದರೆ 2020 ರವರೆಗೆ ನಾನು ಐಟಂ ನಂ 3 ರ ಸ್ವತ್ತಿಗೆ ನಾನು ಹೋಗಿರುತ್ತೇನೆ. ಸಾಲ ಪಡೆದ ವಿಚಾರವನ್ನು ಏಕೆ ವಿಚಾರಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ಬಗ್ಗೆ ಒಂದನೇ ಪ್ರತಿವಾದಿಯನ್ನು ಕೇಳಬೇಕು ಮತ್ತು 2016 ರಲ್ಲಿ ನನ್ನ ತಾಯಿ ತೀರಿಕೊಂಡ ನಂತರ ಒಂದನೇ ಪ್ರತಿವಾದಿಯ ವರ್ತನೆ ಬದಲಾಯಿತು ಎಂದು ತಿಳಿಸಿರುತ್ತಾರೆ. ಅವರು ಪಡೆದ ಸಾಲಕ್ಕೂ ನಮ್ಮ ಕುಟುಂಬಕ್ಕೂ ಸಂಬಂಧ ಇಲ್ಲ . ಅವರು ಪಡೆದಿರುವ ಸಾಲ ನನಗೆ ಈಗ ಗೊತ್ತಾಯಿತು ಎಂದು

ತಿಳಿಸಿರುತ್ತಾರೆ. ಐಟಂ ನಂ 3 flat ನಿಂದ ಎಷ್ಟು ಉತ್ಪತ್ತಿ ಬರುತಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ಪತ್ತಿ ಬರುತಿರಲಿಲ್ಲ ಅದನ್ನು ಸ್ವಂತಕ್ಕೆ ಉಪಯೋಗಿಸುತಿದ್ದೆವು ಎಂದು ತಿಳಿಸಿರುತ್ತಾರೆ . ಐಟಂ ನಂ 3 flat ಗೆ ಎಷ್ಟು ಖರ್ಚು ಆಗುತಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕರೆಂಟ್ ಶುಲ್ಕ ಮತ್ತು ನಿರ್ವಹಣೆ ಶುಲ್ಕ ಮಾತ್ರ ಬರುತಿತ್ತು ಎಂದು ತಿಳಿಸಿರುತ್ತಾರೆ . ಸದ್ರಿ flat ಗೆ interior ಮಾಡಿಸಿದ ಬಗ್ಗೆ ಗೊತ್ತು . ಆಗ ರೂ 3 ಲಕ್ಷ ಖರ್ಚಾಗಿತ್ತು. ಅದನ್ನು ನಾನೇ ಮುಂದೆ ನಿಂತು ಮಾಡಿಸಿರುತ್ತೇನೆ. ಅದನ್ನು ಮಾಡಿದ ಕಾರ್ಪೆಂಟರ್ ಹೆಸರು ಶರತ್, ಆದರೇ ಲೆಕ್ಕ ವನ್ನು ನನ್ನ ಅಣ್ಣನೇ ಇಟ್ಟುಕೊಂಡಿರುತಾನೆ ಎಂದು ತಿಳಿಸಿರುತ್ತಾರೆ. ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ಸದ್ರಿ ಆಸ್ತಿಯನ್ನು ತನ್ನ ಸ್ವಂತ ಆಸ್ತಿಯೆಂದು ಆದಾಯ ತೆರಿಗೆ ಇಲಾಖೆಗೆ ಘೋಷಣೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ ನಾನು ನೋಡಿಲ್ಲ. 2020 ರವರೆಗೆ ನನ್ನ ಅಣ್ಣನೇ ನೋಡಿಕೊಳ್ಳುತಿದ್ದ. ನನ್ನ ಐಟಿ ರಿಟನ್ಸ್ ನಲ್ಲಿ ಸದ್ರಿ ಸ್ವತ್ತು ಜಂಟಿ ಸ್ವತ್ತು ಎಂದು ಘೋಷಣೆ ಮಾಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ದಾವೆ ಹಾಕುವ ಸಮಯದಲ್ಲಿ ನನ್ನ ಐಟಿ ರಿಟನ್ಸ್ ನ್ನು ಪಡೆದಿಲ್ಲ. ನನ್ನ ಖಾತೆಯಿಂದ flat ನ್ನು ಖರೀದಿಸಲು ಹಣ ಹೋಗಿದೆಯೇ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿಲ್ಲ. ಚೆಕ್ ನಗದೀಕರಣಗೊಂಡ ಬಗ್ಗೆ ಆಕ್ಸಿಸ್ ಬ್ಯಾಂಕ್ ನವರು ದಾಖಲೆ ಕೊಟ್ಟಿರುತಾರೆ ಎಂದರೆ ಸಾಕ್ಷಿ ಬ್ಯಾಂಕಿನವರನ್ನೇ ಕೇಳಬೇಕು ಎಂದು ತಿಳಿಸಿರುತಾರೆ. settlement deed ನ ಆದಾರದಮೇಲೆ flat ನ ಖಾತೆ ನನ್ನ ಅತ್ತಿಗೆಯ ಹೆಸರಿಗೆ ವರ್ಗಾವಣೆ ಆಗಿ ಮಹಾನಗರ ಪಾಲಿಕೆಯಲ್ಲಿ ಅವರ ಹೆಸರು ದಾಖಲೆ ಆಗಿದೆ ಎಂದರೆ ಸಾಕ್ಷಿ ದಾವೆ ಹಾಕುವವರೆಗೆ ಗೊತ್ತಿರಲಿಲ್ಲ ಎಂದು ತಿಳಿಸಿರುತ್ತಾರೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಒ.ಎಸ್.  - 34/2020

ಪಿ.ಡಬ್ಲ್ಯು - 01

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.